# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. 102/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ನಾಗಮ್ಮ | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ | ಲೇಟ್ ಬಸವರಾಜು | **30.06.2025** |
| **ವಯಸ್ಸು** | ಃ | **40 ವರ್ಷ** | |
| **ವೃತ್ತಿ** | ಃ | ಗೃಹಿಣಿ | **ಪ್ರಾ.ಸಾ. ಃ 5** |
| **ವಾಸಸ್ಥಳ** | ಃ | ಬಿಳಿಗೆರೆ ಗ್ರಾಮ | **ಚಾ.ಸಾ. ಃ 1** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರೆಲ್ಲರು ಗೊತ್ತು ಅವರು ನನ್ನ ಭಾವ, ಅತ್ತೆ, ಮಾವ ಮತ್ತು ಅವರ ಮಕ್ಕಳು. ನನ್ನ ಗಂಡ ಈಗ ಇರುವುದಿಲ್ಲ. ದಿನಾಂಕ *13.11.2020* ರಂದು ಬಿಳಿಗೆರೆ ಗ್ರಾಮದಲ್ಲಿರುವ ನನ್ನ ಗಂಡನ ತಾತನ ಹೆಸರಿಗೆ ಇದ್ದಂತಹ ಜಮೀನಿನಲ್ಲಿ ಒಂದು ಹುಣಸೇ ಮರ ಇದ್ದು ಆ ಹುಣಸೇ ಮರಕ್ಕೆ ಹಗ್ಗ ಹಾಕಿ ನೇಣು ಹಾಕಿಕೊಂಡಿದ್ದರು. ನನ್ನ ಮದುವೆ *2000* ನೇ ಇಸವಿಯಲ್ಲಿ ಮೃತನೊಂದಿಗೆ ಆಗಿತ್ತು. ನಾನು, ನನ್ನ ಗಂಡ ಹಾಗು ಆರೋಪಿತರು ಸುಮಾರು *10-12* ವರ್ಷಗಳ ವರೆಗೆ ಚೆನ್ನಾಗಿ ಇದ್ದೆವು. ಬಿಳಿಗೆರೆ ಗ್ರಾಮದಲ್ಲಿ ಒಂದು ಖಾಲಿ ಸೈಟು ಇತ್ತು ಅದೂ ಸಹ ನನ್ನ ಗಂಡನ ತಾತನಿಗೆ ಸೇರಿದ್ದಾಗಿತ್ತು. ಆ ಸೈಟ್ ನಲ್ಲಿ ಮನೆ ಕಟ್ಟುವ ಸಲುವಾಗಿ ನನ್ನ ಹೆಸರಿಗೆ ಮನೆ ಮಂಜೂರಾಗಿತ್ತು. ಆ ಸೈಟ್ ನಲ್ಲಿ ಮನೆ ಕಟ್ಟಿದ್ದೆವು. ಸರ್ಕಾರದಿಂದ *3* ನೇ ಬಿಲ್ ಆದ ಮೇಲೆ ಆರೋಪಿತರು ನಂತರದ ಬಿಲ್ ಗಳನ್ನು ಮಾಡಬೇಡಿ ಎಂದು ಹೇಳಿ ಸರ್ಕಾರಕ್ಕೆ ಅರ್ಜಿ ಕೊಟ್ಟು ನಿಲ್ಲಿಸಿದ್ದರು.

ಆದ್ದರಿಂದ ನನ್ನ ಗಂಡ ಅವರ ಅಣ್ಣನಿಗೆ ನಿಮಗೆ ಮನೆ ಇರುತ್ತದೆ ನನಗೆ ಮನೆ ಇರುವುದಿಲ್ಲ ಮನೆ ಕಟ್ಟಿಕೊಳ್ಳುತ್ತೇನೆ ಎಂದು ಹೇಳಿದ್ದರಂತೆ ಅದಕ್ಕೆ ಮನೆ ಕಟ್ಟಿಕೋ ಎಂದು ಹೇಳಿ ಗಲಾಟೆ ಮಾಡಿದ್ದರು. ನನ್ನ ಗಂಡನಿಗೆ ಆ ಸೈಟ್ ಅನ್ನು ನಿನ್ನ ಹೆಂಡತಿ ಹೆಸರಿಗೆ ಹೇಗೆ ಮಾಡಿಸಿಕೊಂಡೆ ನಿನ್ನನ್ನು ಮನೆಯಲ್ಲಿ ಇರಲು ಬಿಡುವುದಿಲ್ಲ ಎಂದು ಹೇಳಿದ್ದರು. ಅದೇ ಸಂಬಂಧವಾಗಿ ಗಲಾಟೆ ನಡೆಯುತ್ತಲೇ ಇತ್ತು. ನಾವು ಕಟ್ಟಿಸಿದ ಮನೆಯಲ್ಲಿ ಇದ್ದರೇ ಕೊಲೆ ಮಾಡುತ್ತೇವೆ ಎಂದು ಆರೋಪಿತರು ಹೇಳುತ್ತಿದ್ದರು. ನಾವು ಭಯಭೀತರಾಗಿ ನನ್ನ ತಾಯಿಯ ಮನೆಯಾದ ಕಲ್ಲಳ್ಳಿಗೆ ನಾನು, ನನ್ನ ಗಂಡ ಮತ್ತು ಮಗ ಹೋಗಿದ್ದೆವು.

ನನ್ನ ಗಂಡ ಆಗಾಗ್ಗೆ ಕಲ್ಲಳ್ಳಿಯಿಂದ ಬಿಳಿಗೆರೆ ಗ್ರಾಮಕ್ಕೆ ಮನೆ ನೋಡಿಕೊಂಡು ಹೋಗಲು ಮತ್ತು ಏನನ್ನಾದರು ಮಾಡೋಣ ಎಂದು ಹೇಳಿ ಬರುತ್ತಿದ್ದರು ಆಗ ಆರೋಪಿತರು ನನ್ನ ಗಂಡನಿಗೆ ನೀನು ಮನೆಗೆ ಬರಬೇಡ ಎಂದು ಹೇಳಿ ಜಗಳ ಮಾಡುತ್ತಿದ್ದರು. ಆರೋಪಿತರು ಗಲಾಟೆ ಮಾಡುತ್ತಿದ್ದರಿಂದ ನನ್ನ ಗಂಡ ಜಿಲ್ಲಾಧಿಕಾರಿಯವರಿಗೆ ದೂರನ್ನು ಕೊಟ್ಟಿದ್ದರು. ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ನಮ್ಮನ್ನು ಮತ್ತು ಆರೋಪಿತರನ್ನು ಕರೆಸಿ ನ್ಯಾಯಾಲಯದಲ್ಲಿ ಕೇಸು ಇರುತ್ತದೆ ಅದು ತೀರ್ಮಾನವಾಗುವವರೆಗೆ ಒಬ್ಬರಿಗೊಬ್ಬರು ಗಲಾಟೆ ಮಾಡಿಕೊಳ್ಳಬೇಡಿ ಎಂದು ಹೇಳಿ ಕಳೆಸಿದ್ದರು. ಆ ರೀತಿ ಹೇಳಿದ ಮೇಲೆ 2-3 ತಿಂಗಳು ಆರೋಪಿತರು ಸುಮ್ಮನೆ ಇದ್ದರು. ಆ ನಂತರ ನನ್ನ ಗಂಡ ಕಲ್ಲಳ್ಳಿಯಿಂದ ಬಿಳಿಗೆರೆ ಗ್ರಾಮಕ್ಕೆ ಮನೆಯ ಪ್ಲಾಸ್ಟಿಂಗ್ ಕೆಲಸ ಮಾಡಿಸುವ ಸಲುವಾಗಿ ಮತ್ತು ಮನೆಯನ್ನು ನೋಡಿಕೊಂಡು ಹೋಗುವ ಸಲುವಾಗಿ ಬರುತ್ತಿದ್ದರು. ನನ್ನ ಗಂಡ ಸಾಯುವ ಹಿಂದಿನ ದಿವಸ ಆರೋಪಿತರು ಗಲಾಟೆ ಮಾಡುತ್ತಿದ್ದಾರೆ ಮನೆಯಲ್ಲಿ ಇರಲು ಬಿಡುತ್ತಿಲ್ಲ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದಾರೆ ಎಂದು

ಫೋನ್ ಮಾಡಿ ನನಗೆ ತಿಳಿಸಿದ್ದರು. ಅದಕ್ಕೆ ನಾನು ನನ್ನ ಗಂಡನಿಗೆ ನೀನು ತಾಯಿ ಮನೆಗೆ ಬಂದುಬಿಡು ಎಂದು ಹೇಳಿದ್ದೆ ಅದಕ್ಕೆ ನನ್ನ ಗಂಡ ರಾತ್ರಿ ಯಾಗಿರುತ್ತದೆ ಬೆಳಗ್ಗೆ ಬರುತ್ತೇನೆ ಎಂದು ಹೇಳಿದ್ದರು. ಮಾರನೇ ದಿನ ಗ್ರಾಮಸ್ಥರು ನನಗೆ ಮತ್ತು ನನ್ನ ತಮ್ಮನಿಗೆ ಫೋನ್ ಮಾಡಿ ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯವನ್ನು ತಿಳಿಸಿದರು. ನಾನು ನನ್ನ ತಮ್ಮನನ್ನು ಕರೆದುಕೊಂಡು ಬಿಳಿಗೆರೆ ಗ್ರಾಮಕ್ಕೆ ಬಂದಿದ್ದೆ. ಬಿಳಿಗೆರೆ ಗ್ರಾಮಕ್ಕೆ ಬಂದು ನನ್ನ ಗಂಡ ಮರಣ ಹೊಂದಿದ ಸ್ಥಳಕ್ಕೆ ಹೋಗಿದ್ದೆವು. ಅಲ್ಲಿ ಹೋದಾಗ ಜನರೆಲ್ಲಾ ಇದ್ದರು ನನ್ನ ಗಂಡ ಹುಣಸೇ ಮರಕ್ಕೆ ಹಗ್ಗದಿಂದ ನೇಣು ಹಾಕಿಕೊಂಡಿದ್ದ. ನಾನು ಹೆಣವನ್ನು ನೋಡಿ ಅಳುತ್ತಾ ಇದ್ದೆ ಗ್ರಾಮಸ್ಥರು ನನ್ನ ತಮ್ಮನ ಕಡೆ ಬಂದು ಮುಂದಿನ ಕಾರ್ಯವನ್ನು ನೀವು ಮಾಡಿ ಎಂದು ಹೇಳಿದರು. ಆ ನಂತರ ನಾನು ಬಿಳಿಗೆರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೆ. ಗ್ರಾಮಸ್ಥರಲ್ಲಿ ಒಬ್ಬರಾದ ಶಿವು ಎನ್ನುವವರು ದೂರನ್ನು ಬರೆದು ಕೊಟ್ಟಿದ್ದರು. ಆ ದೂರನ್ನು ನಾನು ಹೇಳಿದ ಪ್ರಕಾರ ಬರೆದುಕೊಟ್ಟಿದ್ದರು. ಆ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದೂರನ್ನು ತೋರಿಸಲಾಯಿತು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-7 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ನಾನು ದೂರು ಕೊಟ್ಟ ಮೇಲೆ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಮತ್ತು ಹೆಣವನ್ನು ಕೆಳಕ್ಕೆ ಇಳಿಸಿದರು. ಹೆಣವನ್ನು ಇಳಿಸಿದಾಗ ನಾನು ಹೆಣವನ್ನು ನೋಡಿದ್ದೆ. ಕತ್ತಿಗೆ ಹಗ್ಗ ಸುತ್ತಿತ್ತು. ಬಟ್ಟೆಯಲ್ಲಿ ಹುಡುಕಿದರು. ಪ್ಯಾಂಟ್ ನ ಹಿಂದಿನ ಜೇಬಿನಲ್ಲಿ ಒಂದು ಡೆತ್ ನೋಟ್ ಇತ್ತು ಆ ಡೆತ್ ನೋಟ್ ಅನ್ನು ಪೊಲೀಸರು ತೆಗೆದುಕೊಂಡಿದ್ದರು. ಆ ಡೆತ್ ನೋಟ್ ನಲ್ಲಿ ತನ್ನ ಸಾವಿಗೆ

ಆರೋಪಿತರೇ ಕಾರಣ ಎಂದು ಬರೆದಿತ್ತು. ಉಮೇಶ, ಸಿದ್ದು, ಮೂಗಯ್ಯ, ಸೋಮಣ್ಣ, ಜಯಶೀಲ ಮತ್ತು ಬಸವರಾಜು ಎಂಬವರು ಇದ್ದರು. ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿದ್ದರು. ಹೆಣವನ್ನು ಶವ ಪರೀಕ್ಷೆ ಸಲುವಾಗಿ ಮೈಸೂರಿಗೆ ಕಳುಹಿಸಿದ್ದರು. ನಾನು ಈಗ ನೋಡುತ್ತಿರುವ ಫೋಟೋಗಳನ್ನು ಸ್ಥಳದಲ್ಲಿ ಹೆಣವನ್ನು ಇಳಿಸಿದಾಗ ತೆಗೆದಂತಹ ಫೋಟೋಗಳು ಇರುತ್ತವೆ. ಸಾಕ್ಷಿದಾರರು 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲ್ಪಟ್ಟಿರುತ್ತವೆ. ಪೊಲೀಸರು ಡೆತ್ ನೋಟ್ ಅನ್ನು ತೆಗೆದುಕೊಂಡಾಗ ನಾನು ನೋಡುತ್ತಿರುವ ಸಹಿಯನ್ನು ಮಾಡಿದ್ದೆ. ಸಾಕ್ಷಿದಾರರು ನೋಡಿ ಗುರುತಿಸಿದ ದಾಖಲೆ ಅಮಾನತ್ತು ಪಂಚನಾಮೆಯಿದ್ದು ಅದನ್ನು ಈಗಾಗಾಲೇ ನಿಪಿ-5 ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ನಂತರ 3 ದಿವಸಕ್ಕೆ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಠಾಣೆಯಲ್ಲಿ ಡೆತ್ ನೋಟ್ ನ ಮೇಲಿರುವ ಬರವಣಿಗೆ ನನ್ನ ಗಂಡನದಾ  ಎಂದು ಕೇಳಿದರು ನಾನು ಹೌದು ಎಂದು ಹೇಳಿದ್ದೆ. ಆ ವೇಳೆಗೆ ನನ್ನ ಗಂಡ ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದ ದೂರಿನ ಪತ್ರ ಸಹ ಬಂದಿತ್ತು ಮತ್ತು ನನ್ನ ಗಂಡ ಬರೆಯುತ್ತಿದ್ದ ಬರವಣಿಗೆಯ ದಾಖಲೆ ಮನೆಯಲ್ಲಿ ಇತ್ತು ಅದನ್ನು ಸಹ ನಾನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದೆ. ನಾನು ಈಗ ನೋಡುತ್ತಿರುವ ಸಹಿಯನ್ನು ನನ್ನನ್ನು  ಪೊಲೀಸ್ ಠಾಣೆಗೆ ಕರೆಸಿದಾಗ ಮಾಡಿದ್ದೆ. ಸಾಕ್ಷಿದಾರರು ನೋಡಿ ಗುರುತಿಸಿದ ದಾಖಲೆ ದಿನಾಂಕ 16.11.2020 ರ ಅಮಾನತ್ತು ಪಂಚನಾಮೆ ಇದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲ್ಪಟ್ಟಿದು ಸಾಕ್ಷಿದಾರರ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲ್ಪಟ್ಟಿರುತ್ತದೆ. ಆ ದಿನ ನಾನು ಠಾಣೆಗೆ ಹಾಜರುಪಡಿಸಿದ ದಾಖಲೆಯನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಸದರಿ ದಾಖಲೆಯನ್ನು ತೋರಿಸಲಾಯಿತು ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲ್ಪಟ್ಟಿರುತ್ತದೆ. ಸಾಕ್ಷಿದಾರರ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

ನಾನು ಡೆತ್ ನೋಟ್ ಅನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿದಾರರಿಗೆ ಡೆತ್ ನೋಟ್ ಅನ್ನು ತೋರಿಸಲಾಯಿತು. ಸಾಕ್ಷಿದಾರರು ಡೆತ್ ನೋಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಾನು ನನ್ನ ಗಂಡನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನಿಪಿ-8 ರ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಡೆತ್ ನೋಟ್ ಅನ್ನು ತೆಗೆದುಕೊಂಡಾಗ ಬಸವರಾಜು, ಸೋಮಣ್ಣ, ಜಯಶೀಲ, ಉಮೇಶ, ಮೂಗಯ್ಯ ಮತ್ತು ಸಿದ್ದು ಇದ್ದರು.

ನನ್ನ ಗಂಡನ ಮೇಲೆ ಆತನ ಅಣ್ಣ ಆಗಾಗ್ಗೆ ಗಲಾಟೆ ಮಾಡುತ್ತಿದ್ದರಿಂದ ನನ್ನ ಗಂಡ ಜಿಲ್ಲಾಧಿಕಾರಿಯವರಿಗೆ ದೂರನ್ನು ಕೊಟ್ಟಿದ್ದರು. ನನ್ನ ಗಂಡ ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದ ದೂರಿನ ಕಾಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದೂರಿನ ಕಾಪಿಯನ್ನು ತೋರಿಸಲಾಯಿತು. ಸಾಕ್ಷಿದಾರರು ದೂರಿನ ಕಾಪಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮೃತನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಸಹಿ ನನ್ನ

ಗಂಡನ ಸಹಿಯಾಗಿರುತ್ತದೆ. ಸಾಕ್ಷಿದಾರರು ನೋಡಿ ಗುರುತಿಸಿದ ದಾಖಲೆ ಪೊಲೀಸ್ ಹಿಂಬರಹ ಇದ್ದು ಅದನ್ನು ನಿಪಿ-*10* ಎಂದು ಮೃತನ ಸಹಿಯನ್ನು ನಿಪಿ-*10*(ಎ) ಎಂದು ಗುರುತಿಸಲಾಯಿತು.

( ಸಾಕ್ಷಿದಾರರಿಗೆ ಬಿಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಸಾಕ್ಷಿದಾರರಿಗೆ ಒಂದು ನೀಲಿ ಬಣ್ಣದ ಪ್ಯಾಂಟ್, ಒಂದು ನೀಲಿ ಬಣ್ಣದ ಅಂಡರ್ ವೇರ್ , ಬಿಳಿ ಶರ್ಟ್ ಮತ್ತು ಹಳದಿ ಮತ್ತು ಹಸಿರು ಬಣ್ಣದ ಹಗ್ಗವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂ.ಓ-*1* ರಿಂದ ಎಂ.ಓ-*4* ಎಂದು ಗುರುತಿಸಲಾಯಿತು.

ಜಮೀನಿನ ಬಗ್ಗೆ ನ್ಯಾಯಾಲಯದಲ್ಲಿ ಕೇಸು ಇತ್ತು ಆರೋಪಿತರು ಆಗಾಗ್ಗೆ ಜಗಳ ಮಾಡುತ್ತಿದ್ದರು ಮನೆಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿದ್ದರಿಂದ ಜಗಳ ಮಾಡುತ್ತಿದ್ದರು. ಪೊಲೀಸಿನವರು ಪುನಃ ನನ್ನನ್ನು ಠಾಣೆಗೆ ಕರೆಸಿದ್ದರು. ಆ ವೇಳೆಯಲ್ಲಿ ಡೆತ್ ನೋಟ್ ನಲ್ಲಿ ಇದ್ದ ಬರವಣಿಗೆ ಮತ್ತು ನಾನು ಮನೆಯಲ್ಲಿ ಇದ್ದಂತಹ ದಾಖಲೆಯನ್ನು ಹಾಜರುಪಸಿಡಿದ ಬರವಣಿಗೆ ಒಂದೇ ಇರುತ್ತದೆ ಎಂದು ಬೆಂಗಳೂರಿನಿಂದ ವರದಿ ಬಂದಿರುತ್ತದೆ ಎಂದು ತಿಳಿಸಿದ್ದರು. ಮತ್ತೆ ಪೊಲೀಸಿನವರು ಕರೆಸಿರಲಿಲ್ಲ ನಾನು ಪುನಃ ಹೇಳುವುದೇನೆಂದರೆ ಈಗ ಮರೆತು ಹೋಗಿರುತ್ತದೆ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ-**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

....

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇ ಎ ಒ.,**

***4* ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು**